**ಓಎಸ್ ನಂಃ 69/2021 ಪಿ.ಡಬ್ಲ್ಯೂ- 1**

**ದಿನಾಂಕಃ 22.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ
ಶ್ರೀ ಎಸ್ ಆರ್ ಬಿ ವಕೀಲರಿಂದಃ

ನಿಪಿ 7 ಯಾವ ಉದ್ದೇಶಕ್ಕಾಗಿ ಕೊಟ್ಟಿರುತ್ತೀರಾ ಎಂದರೆ ಶ್ರೀನಿವಾಸ ಎನ್ನುವವರು ಪ್ರತಿವಾದಿ ಶ್ರೀರಾಮಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ. ಉದ್ದೇಶ ಪೂರ್ವಕವಾಗಿ ನಮ್ಮ ಆಸ್ತಿ ಮೇಲೆ ಶ್ರೀರಾಮಪ್ಪ ಬಂದಿರುತ್ತಾರೆ. ನಿಪಿ 7 ರಲ್ಲಿರುವ ಆಸ್ತಿ ಚಕ್ಕುಬಂದಿ ಗೊತ್ತಾ ಎಂದರೆ ಗೊತ್ತು. ನಿಪಿ 7 ರಲ್ಲಿ ಉತ್ತರಕ್ಕೆ ಶ್ರೀನಿವಾಸ ಎಂದು ಇರುತ್ತದೆ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿ ಯಾರ ಕಡೆಯಿಂದ ಆಸ್ತಿ ಕೊಂಡಿರುತ್ತಾರೆ ಎಂದರೆ ಶ್ರೀನಿವಾಸರವರಿಂದ ಎನ್ನುತ್ತಾರೆ. ಪ್ರತಿವಾದಿ ಮಾರಾಟ ಮಾಡಿರುವ ವ್ಯಕ್ತಿ ಶ್ರೀನಿವಾಸ ಎಂಬುವವರಿಗೆ ನಿಪಿ 7 ರಲ್ಲಿ ಉತ್ತರ ದಿಕ್ಕಿಗೆ ಇರುತ್ತಾರೆ ಎಂದರೆ ಇಲ್ಲ. ನಿಪಿ 7 ರಲ್ಲಿರುವ ಚಕ್ಕುಬಂದಿ ಸರಿ ಇಲ್ಲವಾ ಎಂದರೆ ಸರಿ ಇರುತ್ತದೆ. ನೀವು ಆಸ್ತಿಯನ್ನು ದಿಃ **17.05.2001** ರಲ್ಲಿ ಖರೀದಿ ಮಾಡಿರುತ್ತೀರಿ ಎಂದರೆ ಹೌದು. ನೀವು ಯಾರ ಕಡೆಯಿಂದ ಖರೀದಿ ಮಾಡಿರುತ್ತೀರಿ ಎಂದರೆ ಚಂದ್ರಮ್ಮರವರಿಂದ ಮಾಡಿರುತ್ತೆನೆ. ದಿಃ **21.02.2003** ರಂದು ಆ ದಿನಾಂಕದಂದು ನೀವು ಉತ್ತರಕ್ಕೆ ಚಂದ್ರಮ್ಮರವರ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ಇಲ್ಲಿಯವರೆಗೂ ಪಂಚಾಯಿತಿಯಿಂದ ಇ-ಖಾತಾ ನೀವು ಕೊಂಡಿರುವ ಆಸ್ತಿಗೆ ಆಗಿಲ್ಲ ಎಂದರೆ ಇಲ್ಲ. ಇ-ಖಾತಾ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿರುತ್ತೀರಾ ಎಂದರೆ ಮಾಡಿರುತ್ತೆನೆ. ಪಂಚಾಯಿತಿ ಯವರು ದಾಖಲಾತಿ ಸರಿ ಇಲ್ಲ ಎಂದು ಇ-ಖಾತಾ

ಮಾಡಿಲ್ಲ ಎಂದರೆ ಸಾಕ್ಷಿ ಮುಂದಮರೆದು ಇ-ಖಾತಾ ಮಾಡಬಾರದೆಂದು ಬೇರೆಯವರು ಅರ್ಜಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಇ-ಖಾತಾ ಮಾಡಿಲ್ಲದ ಕಾರಣ ಪಂಚಾಯಿತಿಯವರ ವಿರುದ್ಧ ಮೆಲ್ಮನವಿ ಸಲ್ಲಿಸಿರುತ್ತೀರಾ ಎಂದರೆ ಇಲ್ಲ. ದಾವೆಯಲ್ಲಿ ತೋರಿಸಿರುವ ಆಸ್ತಿ ನಿಮಗೆ ಇಲ್ಲ ಆದ್ದರಿಂದ ಪಂಚಾಯಿತಿಯವರಿಂದ ಇ-ಖಾತಾ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.